# ಕಠೋರ ಪಾಷಾಣ ವಿಷಮುಷ್ಠಿ

■ ಡಾ. ಗಿರಿಧರರಾವ್ ಹವಲ್ದಾರ್





ವಿಷಮುಷ್ಠಿ ಅತ್ಯಂತ ವಿಷಕಾರಿಯಾದ ಗಿಡಮೂಲಿಕೆ ಅಥವಾ ಔಷಧೀ ಸಸ್ಯ. ಹೋಮಿಯೋಪತಿ ವೈದ್ಯ ಪದ್ಧತಿಯಲ್ಲಿ ನಕ್ಸವಾಮಿಕಾ ಎಂಬ ಹೆಸರಿನಲ್ಲಿ ಇದು ಪ್ರಮುಖ ಔಷಧಿಯಾಗಿ ಬಳಕೆಯಾಗುತ್ತಿದೆ.

ಕನ್ನಡದಲ್ಲಿ  ಹೇಮುಷ್ಠಿ, ನಂಜಿನ ಕೊರಡು, ಕಾಸರಿಕೆ, ಕಾತರಿಕೆ, ಕಾಸರಕ ಎಂತಲೂ, ಸಂಸ್ಕೃತದಲ್ಲಿ ಕುಪಿಲು ಅಥವಾ ಶುದ್ಧ ಕುಪಿಲು, ಹಿಂದಿಯಲ್ಲಿ ಕುಚ್ಲಾ, ಮರಾಠಿಯಲ್ಲಿ ಕಾಜ್ರಾ, ತಮಿಳಿನಲ್ಲಿ ಯೆಟ್ಟಿಕೊಟ್ಟೈ, ತೆಲುಗು ಭಾಷೆಯಲ್ಲಿ ಮುಷ್ಠಿವಿಟ್ಟುಲು, ತುಳುವಿನಲ್ಲಿ ಕಾಯೆರ್ ಹಾಗೂ ಆಂಗ್ಲ ಭಾಷೆಯಲ್ಲಿ 'ಪಾಯಿಸನ್ ನಟ್' ಎಂದು ಕರೆಯಲಾಗುವ ವಿಷಮುಷ್ಠಿಯು, ಲೊಗಾನಿಯೇಸಿ ಅಥವಾ ಲೋಗಾನಿಯಾ ಸಸ್ಯ ಕುಟುಂಬಕ್ಕೆ ಸೇರಿದೆ. ಇದರ ಸಸ್ಯ ಶಾಸ್ತ್ರೀಯ ಹೆಸರು ಸ್ಟ್ರಿಕ್‌ನಾಸ್ ನಕ್ಸವಾಮಿಕಾ. ಕ್ವೇಕರ್ ಬಟನ್ಸ್. ವಾಮಿಕ್ವಾಯೆರ್ ಹಾಗೂ ಸ್ನೇಕ್ ಉಡ್ ಎಂದೂ ಇದನ್ನು ಕರೆಯುತ್ತಾರೆ.

ದಪ್ಪ ಬೊಡ್ಡೆಯ, ಮಧ್ಯಮ ಗಾತ್ರದ ಮರವಾಗಿ ಬೆಳೆಯುವ ವಿಷಮುಷ್ಟಿಯ ಮೂಲ ಸ್ಥಾನವು  ಆಗ್ನೇಯ ಏಷ್ಯಾದ ದೇಶಗಳೆಂದು ಹೇಳಲಾಗಿದ್ದು, ಮ್ಯಾನ್ಮಾರ್, ಚೀನಾ, ಥಾಯ್ಲೆಂಡ್ ದೇಶಗಳಲ್ಲಿ ಹಾಗೂ ಆಸ್ಟ್ರೇಲಿಯಾದ ಉತ್ತರಭಾಗದಲ್ಲಿ ಇದು ಕಾಣ ಸಿಗುತ್ತದೆ. ಈಶಾನ್ಯ ಭಾರತದ ಕಾಡುಗಳಲ್ಲಿ ವಿಷಮುಷ್ಠಿಯು ಹೆಚ್ಚಾಗಿ ಬೆಳೆಯುತ್ತದೆ. ಎಲೆಗಳು ನುಣುಪಾಗಿದ್ದು ನೋಡಲು ಸುಂದರವಾಗಿರುತ್ತವೆ. ಹಣ್ಣುಗಳು ಕೇಸರಿ ಬಣ್ಣದವುಗಳಾಗಿದ್ದು ಒಳಗೆ ದುಂಡನೆಯ ಗುಂಡಿಗಳಂತಿರುವ ಬೀಜಗಳಿರುತ್ತವೆ. ಬೀಜಗಳು ತೀವ್ರ ವಿಷಕಾರಿಯಾಗಿದ್ದು, ಹಣ್ಣಿನಲ್ಲಿಯೂ ಸ್ವಲ್ಪ ಪ್ರಮಾಣದ ವಿಷವಿರುತ್ತದೆ.

ವಿಷಮುಷ್ಠಿಯ ಬೀಜಗಳು ಔಷಧಿ ತಯಾರಿಕೆಗೆ ಪ್ರಮುಖವಾಗಿ ಬಳಕೆಯಾಗುತ್ತಿದ್ದು,  ಕಿತ್ತಳೆ ಕೆಂಪು ಮಿಶ್ರಿತ ಮಾಗಿದ ಹಣ್ಣುಗಳಿಂದ ತೆಗೆದ ಬೀಜಗಳನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಿಸಿ ನಂತರ ಬೀಜಗಳಿಂದ ಸ್ಟ್ರಿಕ್‌ನೀನ್(**strychnine**) ಮತ್ತು ಬ್ರೂಸಿನ್ (**brucine**)ಎಂಬ ಸಸ್ಯಕ್ಷಾರವನ್ನು (**alkaloids**) ಬೇರ್ಪಡಿಸುತ್ತಾರೆ. ನಮ್ಮ ದೇಹದ ಕೇಂದ್ರ ನರಮಂಡಲ ವ್ಯವಸ್ಥೆಯ ಮೇಲೆ ನೇರ ಪ್ರಭಾವ ಬೀರುವ ಈ ರಾಸಾಯನಿಕಗಳನ್ನು ಒಳಗೊಂಡ ಔಷಧಿಗಳು ವಿವಿಧ ವೈದ್ಯ ಪದ್ಧತಿಗಳಲ್ಲಿ ನಪುಂಸಕತೆ, ನರಗಳ ದೌರ್ಬಲ್ಯ, ಅರತಲೆ ನೋವು, ರಕ್ತಹೀನತೆ, ಖಿನ್ನತೆ, ಹೃದಯ, ಕಣ್ಣು, ಶ್ವಾಸಕೋಶ ಹಾಗೂ ಉದರ ಸಂಬಂಧಿ ಕಾಯಿಲೆಗಳಿಗೆ ಚೂರ್ಣ, ತಾಯಿದ್ರವ ಇತ್ಯಾದಿ ರೂಪದಲ್ಲಿ ಬಳಕೆ ಮಾಡಲಾಗುತ್ತಿದೆ. ಕಾಂಡ ಮತ್ತು ಬೇರನ್ನು ಕೂಡಾ ಔಷಧಿಗೆ ಬಳಸಲಾಗುತ್ತಿದ್ದು, ಇದರ ಕಾಂಡವನ್ನು ನಾಟಿ ವೈದ್ಯರು ನಂಜು ನಿವಾರಕವಾಗಿ ಬಳಸುತ್ತಾರೆ.

ಸ್ಟ್ರಿಕ್‌ನೀನ್ ಹಾಗೂ ಬ್ರೂಸಿನ್ ರಾಸಾಯನಿಕಗಳು ನಮ್ಮ ಮೆದುಳು ಹಾಗೂ ಮಾಂಸ ಖಂಡಗಳ ಮೇಲೆ ನೇರ ಪ್ರಭಾವವನ್ನು ಬೀರುತ್ತವೆ. ಒಂದು ವಾರಕ್ಕಿಂತ ಹೆಚ್ಚುಕಾಲ ಅಥವಾ 30 ಮಿ. ಗ್ರಾಂ. ಗಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಔಷಧಿಯನ್ನು ತೆಗೆದುಕೊಳ್ಳುವುದು ಅಸುರಕ್ಷಿತ. ಗರ್ಭಿಣಿ ಮಹಿಳೆಯರು, ಹಾಲುಣಿಸುವ ತಾಯಂದಿರು ಹಾಗೂ ಯಕೃತ್ತಿನ ತೊಂದರೆ ಉಳ್ಳವರಿಗೆ ಈ ಔಷಧಿಯ ಬಳಕೆ ಸಲ್ಲದು ಎಂದೂ ಹೇಳಲಾಗಿದೆ.

ನಕ್ಸವಾಮಿಕಾ ಅಥವಾ  ವಿಷಮುಷ್ಠಿಯನ್ನು ಒಳಗೊಂಡ ಔಷಧಿಗಳನ್ನು ಕಡ್ಡಾಯವಾಗಿ ವೈದ್ಯರ ಪೂರ್ಣ ಮೇಲ್ವಿಚಾರಣೆಯಲ್ಲಿ ಮಾತ್ರ ಬಳಸಬೇಕು ಎಂದು ಔಷಧಿ ಹಾಗೂ ಸೌಂದರ್ಯ ಪ್ರಸಾಧನಗಳ ಕಾಯ್ದೆಯು ತಿಳಿಸಿದೆ. ಹೀಗಿದ್ದಾಗ್ಯೂ ಅನೇಕರು ಇದನ್ನು ಅಡ್ಡ ಪರಿಣಾಮವಿಲ್ಲದ ಸುರಕ್ಷಿತ ಔಷಧಿಯೆಂದು ತಾವೇ ಕೊಂಡು ಬಳಸುತ್ತಿರುವುದು ನಿಜಕ್ಕೂ ಆತಂಕಕಾರಿ. ವಿಷಮುಷ್ಠಿಯನ್ನು ಇಲಿಗಳನ್ನು ಕೊಲ್ಲಲು ಬಳಸುವ ಕಠೋರ ಪಾಷಾಣದ ತಯಾರಿಕೆಯಲ್ಲಿಯೂ ಪ್ರಮುಖವಾಗಿ ಬಳಸಲಾಗುತ್ತಿದೆ.

(ಚಿತ್ರಗಳು: ಅಂತರ್ಜಾಲ ಕೃಪೆ) ●